ಶ್ರೀ ಕೆ.ಎಂ.ಕೃಷ್ಣಮೂರ್ತಿ :- ಶ್ರೀರಾಮ್ ಚಿಟ್ ಫಂಡ್‌ನಲ್ಲಿ ಪ್ರತಿ ವಾರ ಆಕ್ಷನ್ ಮಾಡುತ್ತಾರೆ. ವಾಸ್ತವವಾಗಿ ಚಿಟ್ ಫಂಡ್ ಎಂದರೆ, ಯಾರು ಷೇರು ಹೋಲ್ಡರ್ಸ್ ಇರುತ್ತಾರೆ, ಅವರು ಸೇರಿ ಆಕ್ಷನ್ ಮಾಡಬೇಕು. ಅಲ್ಲಿ ಶೇರ್‌ಹೋಲ್ಡರ್ ಅಲ್ಲದೇ ಇರುವವರೂ ಭಾಗವಹಿಸುತ್ತಾ ಇದ್ದಾರೆ. ಪ್ರತಿ ತಿಂಗಳೂ ಕರ್ನಾಟಕದ 4 ರಿಂದ 5 ಕೋಟಿ ರೂ.ಗಳ ವರೆಗೆ ಹೋಗುತ್ತದೆ. ಅವರು ಒಂದೊಂದು ಚಿಟ್‌ಗ್ರೂಪ್‌ನ್ನು ಮಾಡಬೇಕಾದರೂ ಸರಕಾರದಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಪರ್ಮಿಷನ್ ತೆಗೆದುಕೊಳ್ಳದಿದ್ದ ಕಾರಣ ರಿಜಿಸ್ಟ್ರಾರ್‌ರವರು ಅವರಿಗೆ ದಂಡ ವಿಧಿಸಿದ್ದಾರೆ. ಅಲ್ಲಿ ಎಷ್ಟು ದುರುಪಯೋಗ ಆಗುತ್ತಿದೆ ಅಂದರೆ, ಇಲ್ಲಿ ಒಂದು ಕಡೆ ಸರಕಾರಕ್ಕೆ ಏಳುಕೋಟಿ 45 ಲಕ್ಷ ರೂ.ಗಳ ನಷ್ಟ, ಇನ್ನೊಂದು ಕಡೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯನ್ನು ಕಾಪಾಡ ಬೇಕಾಗುತ್ತದೆ, ಮಾನ್ಯ ಮಂತ್ರಿಗಳು ಆ ಕೆಲಸವನ್ನು ಮಾಡಬೇಕಾಗುತ್ತದೆ, ಯಾರೇ ಇರಲಿ, ಯಾರೂ ದೊಡ್ಡವರಲ್ಲ. ಹೀಗೆ ಸರಕಾರದ ಹಣ ಸೋರಿಹೋಗುವುದಕ್ಕೆ ನೀವು ಬಿಡುವುದಾದರೆ ನೀವು ಅಲ್ಲಿ ಮಂತ್ರಿಗಳಾಗಿ ಏಕೆ ಇರಬೇಕು? ಯಾರದ್ದೋ ಒಬ್ಬರ ಪರವಾಗಿ ತೀರ್ಮಾನ ತೆಗೆದುಕೊಳ್ಳುವುದಾದರೆ ನೀವು ಏಕೆ ಮಂತ್ರಿಯಾಗಿ ಇರಬೇಕು?

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾವುದೇ ಸರಕಾರದ ಹಣದ ಸೋರಿಕೆಯಿಲ್ಲ. ಅವರು ಹೇಳತಕ್ಕಂಥ ಏಳು ಕೋಟಿ ರೂ.ಗಳು ಶ್ರೀರಾಮ್ ಚಿಟ್‌ಫಂಡ್ ವಿಧಿಸಿದ ದಂಡವೇ ವಿನಹ ಅದು ಸರಕಾರದ ಬೊಕ್ಕಸದಿಂದ ಸೋರಿಹೋದಂಥ ಹಣವಲ್ಲ. ಆದ್ದರಿಂದ ಇಲ್ಲಿ ಸರಕಾರಕ್ಕೆ ಆಗಲಿ, ಸಾರ್ವಜನಿಕರಿಗೆ ಆಗಲಿ, ಯಾವುದೆ ಹಣದ ದುರುಪಯೋಗ, ಸೋರಿಕೆ ಆಗಿಲ್ಲ ಎನ್ನುವಂಥಾದ್ದನ್ನು ಹೇಳಬಯಸುತ್ತೇನೆ.

**ಅಧ್ಯಕ್ಷರು :-** ಮುಂದಿನ ಪ್ರಶ್ನೆ. ಆತ್ಮಾನಂದರವರು ಕೇಳಿ...ಈಗಲೆ ಅರ್ಧಗಂಟೆ ಜಾಸ್ತಿಯಾಗಿದೆ.....

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಸಹಕಾರ ಕಾಯಿದೆಯಲ್ಲಿರುವುದು ನೀವು ನೋಡಿ.. ಪರಿಶೀಲನೆ ಮಾಡಿ..ಅವರು ಏಳು ಕೋಟಿ ರೂ ಹಣವನ್ನು ಕಟ್ಟಬೇಕು.

(ಗೊಂದಲ)

**ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿ ಕಬ್ಬಿನ ಫಸಲನ್ನು ಉಳಿಸುವ ಬಗ್ಗೆ**

207(2112) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ಎಸ್. ವ್ಯಾಪ್ತಿಯ ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿ, ಹಾಲಿ ಬೆಳೆದು ನಿಂತಿರುವ ಕಬ್ಬಿನ ಫಸಲಿಗೆ, ನೀರನ್ನು ದೊರಕಿಸಿ ಕೊಟ್ಟು, ಕಬ್ಬಿನ ಫಸಲನ್ನು ರಕ್ಷಣೆ ಮಾಡಿ ಫಸಲನ್ನು ಉಳಿಸುವುದಾಗಿ ಸರ್ಕಾರ ರೈತರಿಗೆ ಭರವಸೆ ನೀಡಿದೆಯೇ;

ಆ) ಹಾಗಿದ್ದಲ್ಲಿ, ಕೆ.ಆರ್.ಎಸ್.ನಲ್ಲಿ ನೀರಿನ ಸಂಗ್ರಹವಿಲ್ಲದೆ ಕಬ್ಬಿನ ಫಸಲಿಗೆ ನೀರು ಲಭ್ಯವಾಗದಿರುವ ಕಾರಣ, ಬೆಳೆಗಳು ಒಣಗಿ ನಾಶವಾಗುವ ಪರಿಸ್ಥಿತಿಯ ಹಂತಕ್ಕೆ ಬಂದು ತಲುಪಿರುವುದನ್ನು ಸರ್ಕಾರ ಮನಗಂಡಿದೆಯೇ;

ಇ) ಬೆಳೆಗಳ ವಿಫಲತೆಯಿಂದ ರೈತ ಸಂಕಷ್ಟಕ್ಕೆ ಸಿಲುಕಿದ್ದು, ಹಿಂದಿನ ಭರವಸೆ ರೀತ್ಯ ರೈತನ ಸಂಕಷ್ಟಕ್ಕೆ ನೆರವಾಗುವ ವಿಶೇಷ ಕಾರ್ಯಕ್ರಮ ರೂಪಿಸಿದ್ದಲ್ಲಿ, ಅದರ ಬಗೆಗಿನ ವಿವರಗಳೇನು?

ಶ್ರೀ ಹೆಚ್.ಕೆ. ಪಾಟೀಲ್(ಜಲ ಸಂಪನ್ಮೂಲ ಸಚಿವರು) :

ಅ) ಕೃಷ್ಣರಾಜಸಾಗರ ಜಲಾಶಯದ ನೀರಿನ ಸಂಗ್ರಹಣೆಯನ್ನು ಗಮನದಲ್ಲಿ ಇಟ್ಟುಕೊಂಡು 2002ನೇ ಮುಂಗಾರಿನ ಪ್ರಾರಂಭದಲ್ಲಿ ಬೆಳೆದು ನಿಂತ ಕಬ್ಬಿಗೆ ನೀರು ಕೊಡುವುದಾಗಿ ಭರವಸೆ ನೀಡಿದ್ದು, ಅದರಂತೆ ಪೂರೈಸಲಾಗುತ್ತಿದೆ.

ಆ) ಕೃಷ್ಣರಾಜಸಾಗರದಲ್ಲಿಯ ನೀರಿನ ಸಂಗ್ರಹಣೆಯನ್ನು ಗಮನದಲ್ಲಿರಿಸಿಕೊಂಡು 2002-2003ನೇ ಸಾಲಿನಲ್ಲಿ ಅಚ್ಚುಕಟ್ಟು ಪ್ರದೇಶದ ಬೆಳೆಗಳಿಗೆ ನೀರನ್ನು ಪೂರೈಸುವ ಬಗ್ಗೆ ನೀರಾವರಿ ಸಲಹಾ ಸಮಿತಿಯವರು ತೆಗೆದುಕೊಂಡ ನಿರ್ಣಯದಂತೆ ನೀರನ್ನು ಹರಿಸಲಾಗಿದೆ. ಬರದ ಪರಿಸ್ಥಿತಿಯಿಂದ ನೀರಿನ ಸಂಗ್ರಹಣೆಯಲ್ಲಿ ಕೊರತೆಯಾಗಿರುವ ಹಾಗೂ ರೈತರು ಅನುಸರಿಸುವ ಮಾರ್ಗೋಪಾಯದ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ.

ಇ) ಮೇಲಿನ ಉತ್ತರದಿಂದ ಉಸ್ಫವಿಸುವುದಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ :- ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕೃಷ್ಣರಾಜಸಾಗರ ಜಲಾಶಯದಡಿ ಇರತಕ್ಕಂಥ ಹಿಂಗಾರಿನಲ್ಲಿ ಬೆಳೆದ ಕಬ್ಬಿಗೆ ನೀರನ್ನು ಕೊಡುತ್ತೇವೆ ಎಂದು ಭರವಸೆ ನೀಡಿರತಕ್ಕಂಥಾದ್ದನ್ನು ತಿಳಿಸಲಾಗಿದೆ. ಈವರೆವಿಗೆ ಎಷ್ಟು ಎಕರೆ ಪ್ರದೇಶಕ್ಕೆ ನೀರನ್ನು ಬಿಟ್ಟಿದ್ದಾರೆ, ಇನ್ನೂ ಎಷ್ಟು ಅವಧಿಗೆ ನೀರನ್ನು ಬಿಡಲಾಗುತ್ತದೆ, ಹಾಲಿ ಕೃಷ್ಣರಾಜ ಸಾಗರದಲ್ಲಿ, ನಮ್ಮ ಬೆಳೆದು ನಿಂತಿರತಕ್ಕಂಥ ಕಬ್ಬಿನ ಬೆಳೆಗೆ, ಒದಗಿಸಲಿಕ್ಕೆ ನೀರಿನ ಸಂಗ್ರಹ ಇದೆಯೇ ಎಂಬುದನ್ನು ತಿಳಿಸಬೇಕು, ಹಾಗೆಯೆ ಬೆಳೆ ಒಣಗಿ ಹೋಗುತ್ತಾ ಇದೆ ಎಂಬುದನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ನೀರಿನ ಸಂಗ್ರಹಣೆಯಲ್ಲಿ ಬರದಿಂದ ಕೊರತೆಯಾಗಿದೆ ಎಂಬುದನ್ನು ತಿಳಿಸಿದ್ದಾರೆ, ಇದು ವಾಸ್ತವವಲ್ಲ ಎಂಬುದನ್ನು ತಿಳಿಸಿ, ಬೆಳೆ ಒಣಗಿ ಹೋಗಿರತಕ್ಕಂಥಾದ್ದನ್ನು ಸರಕಾರ ಗಮನಿಸಿಲ್ಲವೇ? ಏತಕ್ಕೆ ಗಮನಿಸಿಲ್ಲ, ನೀರನ್ನು ಬಿಡತಕ್ಕಂಥ ಪರಿಸ್ಥಿತಿಯಲ್ಲಿ ಸರಕಾರ ಇದೆಯೇ? ನಮ್ಮ ಮಂಡ್ಯದ ರೈತರ ಹಿತರಕ್ಷಣೆ ಸಮಿತಿಯವರೂ ಕೂಡ, ಬೆಳೆ ಒಣಗಿ ಹೋಗುತ್ತಾ ಇದೆ, ಜನವರಿ ಆದ ನಂತರ, ಕೆಆರ್‌ಎಸ್‌ನಲ್ಲಿ ನೀರಿನ ಸಂಗ್ರಹ ಬರುವುದಿಲ್ಲ, ನೀರಿನ ಲಭ್ಯತೆ ಇರುವುದಿಲ್ಲ, ಅದಕ್ಕಾಗಿ ಬೆಳೆಗಳ ಪರಿಸ್ಥಿತಿಯನ್ನು ವೀಕ್ಷಿಸಿ, ಒಂದು ತಜ್ಞರ ಸಮಿತಿಯನ್ನು ಮಾಡಿ ಬೆಳೆ ಒಣಗಿರತಕ್ಕಂಥದ್ದಕ್ಕೆ ಪರಿಹಾರವನ್ನು ಕೊಡಬೇಕು. ಒಂದು ತಜ್ಞರ ಸಮಿತಿಯನ್ನು ನೇಮಿಸಬೇಕೆಂದು ಮನವಿ ಮೂಲಕ ಸರಕಾರಕ್ಕೆ ಅರ್ಪಿಸಲಾಗಿದೆ. ಅದರಲ್ಲಿ ಸಾಲ ಮನ್ನಾ ಇತ್ಯಾದಿ ವಿಷಯಗಳಿವೆ. ಆದರೆ ಇದುವರೆಗೆ ಸರಕಾರದವರು ಕ್ರಮ ತೆಗೆದುಕೊಂಡಿಲ್ಲ. ಏನು ಕಾರಣ? ನೀರಿಲ್ಲದೆ ಕಬ್ಬು ಒಣಗುತ್ತಾ ಇದೆ, ಯಾತಕ್ಕೆ ಸರಕಾರವು ಬೆಳೆಗಳ ಪರಿಸ್ಥಿತಿಯನ್ನು ವೀಕ್ಷಣೆ ಮಾಡಿಲ್ಲ ಎಂಬುದನ್ನು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಆತ್ಮಾನಂದರವರು ಏನೊಂದು ಪ್ರಶ್ನೆಯನ್ನು ಕೇಳಿದ್ದಾರೆ, ಅದು ಬಹಳ ಪ್ರಮುಖವಾದಂಥ ಪ್ರಶ್ನೆಯಾಗಿದೆ, ಇವೊತ್ತು ಕಾವೇರಿ ಕಣಿವೆ ಪ್ರದೇಶದಲ್ಲಿ, ಕಾವೇರಿ ನದಿ ನೀರನ್ನು ತಮಿಳು ನಾಡಿಗೆ ಬಿಡುವಂಥ ಪರಿಸ್ಥಿತಿಯು ನಿರ್ಮಾಣವಾದಂಥಾದ್ದು, ಆ ಕುರಿತು ಸರಕಾರದವರು ಒಂದೊಂದು ಹಂತದಲ್ಲಿ ಒಂದೊಂದು ನಿರ್ಣಯವನ್ನು ಕೈಗೊಂಡಿದ್ದರಿಂದ ಇವೊತ್ತು, ಅಲ್ಲಿನ ರೈತರು ಬವಣೆಯನ್ನು ಅನುಭವಿಸುವುದನ್ನು ನಾವು ನೋಡುತ್ತಾ ಇದ್ದೇವೆ. ಅದಕ್ಕಾಗಿ ನಮ್ಮ ಹಿರಿಯ ರೈತ ನಾಯಕರಾದಂಥ ಮಾನ್ಯ ಮಾದೇಗೌಡರು ಇದಕ್ಕಾಗಿಯೇ ಒಂದು ಸಭೆಯನ್ನು ಕರೆದಿದ್ದರು. ಈ ಕುರಿತ ಸಮಸ್ಯೆಗಳನ್ನು ಅಲ್ಲಿ ಡಿಸ್‌ಕಸ್ ಮಾಡಬೇಕೆಂದಿದ್ದರು.

ಆ ಸಂದರ್ಭದಲ್ಲಿ ನಾನು, ಹಿರಿಯ ಸದಸ್ಯರಾದಂಥ ಮಾನ್ಯ ಸಿಂಧ್ಯರವರು, ಮತ್ತು ಇನ್ನಿತರ ಸರ್ವ ಪಕ್ಷಗಳ ಮುಖಂಡರುಗಳು ಹೋಗಿದ್ದೆವು. ಅಲ್ಲಿ ಈ ಸಮಸ್ಯೆಗಳನ್ನು ಮುಂದಿಟ್ಟರು. ಅವರ ಬೇಡಿಕೆಗಳು ಏನೆಂದರೆ, ಅಲ್ಲಿ ಸುಮಾರು 80 ಸಾವಿರ ಎಕರೆ ಕಬ್ಬನ್ನು ಅಲ್ಲಿ ಬೆಳೆದಿದ್ದಾರೆ, ಆ ಸ್ಪಾ ್ಯಂಡಿಂಗ್ ಕ್ರಾಪ್‌ಗೆ ನೀರಿನ ಕೊರತೆಯಿಂದಾಗಿ, ಬೆಳೆ ನಷ್ಟವಾಗುವಂಥ ಪರಿಸ್ಥಿತಿಯು ನಿರ್ಮಾಣವಾಗಿದೆ. ಮತ್ತು ಅಲ್ಲಿ ಬರುವಂಥ ಪಟ್ಟಣಗಳಿರಬಹುದು, ನಗರಗಳಿರಬಹುದು, ಅಲ್ಲಿ ಕುಡಿಯುವ ನೀರಿನ ಸಮಸ್ಯೆಯುಂಟಾಗಿರುವುದನ್ನು ನಾವು ಇವೊತ್ತು ನೋಡುತ್ತಾ ಇದ್ದೇವೆ. ಹೀಗಾಗಿ ಈ ಪರಿಸ್ಥಿತಿಯಿಂದ ಯಾವ ರೀತಿಯಾಗಿ ಹೊರಬರಬೇಕು? ಹಾಗೆಯೇ ಅವರು ಏಪ್ರಿಲ್ 14 ರಿಂದ ಅವರು ರ್‍ಯಾಲಿಯನ್ನು ಏರ್ಪಾಡು ಮಾಡುವ ವಿಚಾರ. ಮಂಡ್ಯದಿಂದ ರ್‍ಯಾಲಿಯಲ್ಲಿ ಬಂದು ಮುಖ್ಯಮಂತ್ರಿಯವರ ಮನೆಯ ಮುಂದೆ ಧರಣಿ ನಡೆಸುವ ಕಾರ್ಯಕ್ರಮವನ್ನು ಅವರು ಹಾಕಿಕೊಂಡಿದ್ದಾರೆ. ಅವರು ಕೆಲವೊಂದು ಬೇಡಿಕೆಗಳನ್ನಿಟ್ಟಿದ್ದಾರೆ, ಆಗಿರುವ ಬೆಳೆನಷ್ಟದ ಬಗ್ಗೆ ನೀವು ಸರ್ವೆ ಮಾಡಬೇಕು, ನಷ್ಟದ ಪರಿಹಾರವನ್ನು ಕೊಡಬೇಕೆನ್ನುವಂತಾದ್ದು. ಹಾಗೆಯೇ ಸಂಪೂರ್ಣವಾಗಿ ಬಡ್ಡಿ ಮನ್ನಾ ಆಗಬೇಕೆನ್ನುವಂಥ ಮತ್ತು ಇನ್ನೂ ಹಲವಾರು ಬೇಡಿಕೆಗಳನ್ನು ಅವರು ಇಟ್ಟಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮಾದೇಗೌಡರು ಪತ್ರವನ್ನು ಬರೆದಿದ್ದಾರೆ. ಇವೊತ್ತು ಸಾಕಷ್ಟು ಹೋರಾಟವು ಆ ಭಾಗದಲ್ಲಿ ನಡೆದಿದೆ. ಆ ಚಳುವಳಿಯ ನಾಯಕರು ಇವರಿಗೆ ಲೆಟರ್‌ನ್ನು ಬರೆದರೆ, ಅದಕ್ಕೆ ಒಬ್ಬ ಕಾರ್ಯದರ್ಶಿಗಳಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆ ಕಡೆ ಫೈಲ್ ಕಳುಹಿಸಿದ್ದೇವೆ, ಈ ಕಡೆ ಫೈಲ್ ಕಳುಹಿಸಿದ್ದೇವೆಂದು ಹೇಳುತ್ತಾರೆ. ಒಬ್ಬ ಜವಾಬ್ದಾರಿಯುತ ಮುಖ್ಯಮಂತ್ರಿಗಳಾಗಿ ಮಾನ್ಯ ಮಾದೇಗೌಡರಂಥ ಹಿರಿಯ ರೈತ ನಾಯಕರಿಗೆ, ಪರಿಶೀಲಿಸಿ ಸರಿಯಾದಂಥ ಪರಿಹಾರವನ್ನು ಕೊಡಲು ಪ್ರಯತ್ನ ಮಾಡುತ್ತೇನೆಂದು ಉತ್ತರವನ್ನು ಕೊಡಬೇಕಾಗಿತ್ತು. ಅದನ್ನು ಬಿಟ್ಟು ಈ ರೀತಿಯಾಗಿ ಯಾವುದೋ ರೀತಿಯಲ್ಲಿ ಧಾಟಿಸಿ ಬಿಡಬೇಕೆನ್ನುವ ರೀತಿಯಲ್ಲಿ ಉತ್ತರಿಸಿದ್ದಾರೆ. ಹಿಂದೆ ಪಾದಯಾತ್ರೆಗೆ ಹೋದಂಥ ಸಂದರ್ಭದಲ್ಲಿ ಮಾನ್ಯ ಮಾದೇಗೌಡರನ್ನು ಕರೆದು ಮಾತನಾಡಿಸಿದ್ದಾರೆ. ಆದರೆ ಇವೊತ್ತು ಅವರು ಬರೆದ ಪತ್ರಕ್ಕೆ ಸರಿಯಾದಂಥ ಉತ್ತರವನ್ನು ಸ್ವತಃ ಮುಖ್ಯಮಂತ್ರಿಗಳೇ ಕೊಡುವ ಸೌಜನ್ಯಯನ್ನೂ ಕೂಡ ತೋರಿಸಿಲ್ಲ. ನಮ್ಮ ರೈತ ನಾಯಕರೊಬ್ಬರಿಗೆ ಯಾವ ರೀತಿಯ ಸೌಜನ್ಯವನ್ನು ಮಾನ್ಯ ಮುಖ್ಯಮಂತ್ರಿಗಳು ತೋರಿಸುತ್ತಿದ್ದಾರೆಂಬುದು ಅರ್ಥವಾಗುತ್ತಿದೆ, ಹೀಗಾಗಿ ಬಹಳ ಗಂಭೀರವಾದಂಥ ವಿಷಯವು ಇದರಲ್ಲಿ ಅಡಕವಾಗಿದೆ, ಏಪ್ರಿಲ್ 14ಕ್ಕೆ ಏನು ರ್‍ಯಾಲಿಯನ್ನು ಮಾಡಲು ಹೊರಟಿದ್ದಾರೆ, ಅದಕ್ಕಿಂತ ಮುಂಚೆ ಮಾನ್ಯ ಮಾದೇಗೌಡರನ್ನು, ಹಾಗೂ ರೈತ ಮುಖಂಡರುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕರೆಸಿ ಮಾತನಾಡಲಿ, ಇದಕ್ಕೆ ಏನಾದರೊಂದು ಪರಿಹಾರವನ್ನು ಹುಡುಕಲಿ. ನಾಳೆ ರ್‍ಯಾಲಿ ಪ್ರಾರಂಭವಾಗಿ, ಚಳುವಳಿ ಪ್ರಾರಂಭವಾಗಿ, ರಸ್ತಾರೋಕೊ ಪ್ರಾರಂಭವಾದ ನಂತರ ಪರಿಹಾರವನ್ನು ಹುಡುಕುವುದಲ್ಲ. ಅದಕ್ಕಿಂತ ಮುಂಚೆ ಏನಾದರೊಂದು ಪರಿಹಾರವನ್ನು ಹುಡುಕಬೇಕಾಗುತ್ತದೆ. ಅದಕ್ಕಾಗಿ ನೀವು ಇದಕ್ಕೆ ಇನ್‌ಸಿಯೇಷನ್ ತೆಗೆದುಕೊಂಡು, ಮುಖ್ಯಮಂತ್ರಿಗಳು ಅವರನ್ನು ಕರೆಸಿ ಮಾತನಾಡುವಂಥಾದ್ದು ಮತ್ತು ಪರಿಹಾರವನ್ನು ಕೊಡುವಂಥ ಕೆಲಸ ತತ್‌ಕ್ಷಣ ಆಗಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಆತ್ಮಾನಂದರವರು ಕೇಳಿರತಕ್ಕಂಥ ಪ್ರಶ್ನೆಗೆ ವಿವರವಾದಂಥ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಅವರು ಬಹಳ ಸಮಾಧಾನದಲ್ಲಿರ ಬೇಕಾಗಿತ್ತು. ಏಕೆಂದರೆ ಒಂದು ವಾರದ ಹಿಂದೆ, ಅಲ್ಲಿ ಸಂತೃಪ್ತಿ ತರತಕ್ಕಂಥ ಮಳೆಯಾಗಿದೆ.

ಶ್ರೀ ಎಂ.ಎಸ್. ಆತ್ಮಾನಂದ :- ಆ ಮಳೆ ಸಾಲದು. ಅದು 15 ದಿವಸಕ್ಕೆ ಬೆಳೆಗೆ ಸಾಕಾಗುತ್ತದೆ. ಆ ಮೇಲೆ ಯಥಾಪ್ರಕಾರ ಬೆಳೆ ಒಣಗುತ್ತದೆ. ಅದೇನಿದ್ದರೂ ಕೂಡ ನಮಗೆ ಆಕ್ಸಿಜನ್ ಕೊಟ್ಟಹಾಗೆ, ಬಾಯಿಗೆ ನೀರು ಬಿಟ್ಟಹಾಗೆ ಆಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ :- ನಾನು ಹಾಗೆ ಹೇಳುವುದಿಲ್ಲ... ಮಳೆ ಬರಲಿ ಎಂದು ಸರಕಾರ ಫೋನ್ ಮಾಡಿಲ್ಲ. ಆ ದೇವರ ಕೃಪೆಯಾಗಿದೆ. ನಿಮ್ಮಲ್ಲರ ಶುಭಾಶಯ ನಮಗೆ ಇರುವ ಸಮಸ್ಯೆಗಳು ಕಡಿಮೆಯಾಗಬೇಕೆನ್ನುವುದು ಇರುವುದರಿಂದ ಅಲ್ಲಿ ಮಳೆಯಾಗಿದೆ ಎಂದು ಒಪ್ಪಿಕೊಳ್ಳುತ್ತೇವೆ.... ಈ ಸಂದರ್ಭದಲ್ಲಿ ನೀವು ಕೆಲವು ಅಂಕಿಅಂಶಗಳನ್ನು ಕೇಳಿದ್ದೀರಿ. ಕೆಲವು ಸೂಕ್ಷ್ಮತೆಯ ಕಾರಣ ಅಂಕಿಅಂಶಗಳನ್ನು ಈ ಸದನದಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಆತ್ಮಾನಂದರವರು ನಮ್ಮಲ್ಲಿ ಬಂದರೆ ಅವರ ಜೊತೆಗೆ ವಿಷಯಗಳನ್ನು ಹಂಚಿಕೊಳ್ಳುತ್ತೇನೆ, ಮಾನ್ಯ ಶೆಟ್ಟರ್‌ರವರಿಗೆ ವಿಚಾರಗಳನ್ನು ಕಳುಹಿಸಿಕೊಡುತ್ತೇನೆ. ತಮಗೂ ಸಹಿತ ನಾನು ಕೆಲವು ದಿನಗಳ ಹಿಂದೆ, ನಮ್ಮ ವಾಟರ್ ಲೆವಲ್ ಚಾರ್ಟನ್ನು ಕೊಟ್ಟಿದ್ದೆ, ಅದರಲ್ಲಿನ ವಿಥ್‌ಡ್ರಾವಲ್ಸ್ ಏನಿದೆ ಅದನ್ನು ತಾವು ಗಮನಿಸಿರಿ. ಅದನ್ನು ನೋಡಿದಾಗ ನಿಮಗೂ ಸಮಾಧಾನವಾಗಬಹುದು. ತಕ್ಕದಾಗಿರತಕ್ಕಂಥ ಪ್ರಯತ್ನಗಳನ್ನು ಮಾಡಿ, ಬೆಳೆಯನ್ನು ಉಳಿಸಿಕೊಳ್ಳತಕ್ಕಂಥ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ. ಆ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ. ಆ ಕಾರಣಕ್ಕಾಗಿ ಸ್ವಲ್ಪಮಟ್ಟಿನ ಸಮಾಧಾನ ಆ ಭಾಗದಲ್ಲಿದೆ, ಆ ಸಮಾಧಾನ ನಮಗೂ ಇದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಹಿರಿಯ ಸದಸ್ಯರಾದ ಸನ್ಮಾನ್ಯ ಮಾದೇಗೌಡರು ಪತ್ರ ಬರೆದಿದ್ದರು ಅದಕ್ಕೆ ಉತ್ತರ ಬರೆದಿಲ್ಲವೆಂಬ ಮಾತನ್ನು ಹೇಳಿದ್ದೀರಿ. ಅದು ಸಾಧ್ಯ ಇಲ್ಲವೇ ಇಲ್ಲ. ಒಂದು ವೇಳೆ ಆ ಉತ್ತರವು ತಲುಪುವ ದಾರಿಯಲ್ಲಿರಬಹುದು.

ಶ್ರೀ ಜಗದೀಶ್ ಶೆಟ್ಟರ್ :- ಉತ್ತರ ಬಂದಿದೆ, ಆದರೆ ಯಾರೋ ಅಧೀನ ಕಾರ್ಯದರ್ಶಿಗಳಿಂದ ಉತ್ತರ ಬಂದಿದೆ. ಸಾಮಾನ್ಯ ನಾಗರೀಕರಿಗೆ ಉತ್ತರ ಬರುವ ರೀತಿಯಲ್ಲಿ ಬಂದಿದೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಬರೆಯಬೇಕಾಗಿತ್ತು ಎಂದು ನಮ್ಮ ಒತ್ತಾಯ.

ಶ್ರೀ ಹೆಚ್.ಕೆ. ಪಾಟೀಲ್ :- ಸೌಜನ್ಯಕ್ಕೆ ಈ ರೀತಿಯಾಗಿರತಕ್ಕಂಥ ಶಿಷ್ಟಾಚಾರಕ್ಕೆ ನಮ್ಮ ಮುಖ್ಯಮಂತ್ರಿಯವರು ಮತ್ತೊಬ್ಬರಿಂದ ಪಾಠವನ್ನು ಕಲಿಯಬೇಕಾದ ಅವಶ್ಯಕತೆಯಿಲ್ಲ. ಅದನ್ನು ಅವರು ಹೆಚ್ಚು ರಾಜಕೀಯಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿದ್ದಾರೆ. ಸನ್ಮಾನ್ಯ ಮಾದೇಗೌಡರು ಫೋನ್ ಮಾಡಿದರೆ ನಾನೇ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾವು ಮುಖ್ಯಮಂತ್ರಿಗಳ ನಡವಳಿಕೆ ಬಗ್ಗೆ ಹಾಗೆ ಹೇಳಿದೆವು. ಮುಖ್ಯಮಂತ್ರಿಗಳ ನಡವಳಿಕೆ ಯಾವ ರೀತಿ, ಇದೆ, ಅದರ ಬಗ್ಗೆ ಹೇಳುತ್ತಿದ್ದೇವೆ. ನೀವು ಕೇಳಲಿಲ್ಲ ಎಂದು ನಾವು ಹೇಳಲಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ :- ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹೇಳತಕ್ಕಂಥದ್ದು ಮುಖ್ಯಮಂತ್ರಿಗಳ ಅವರೇ ಪತ್ರವನ್ನು ನೇರವಾಗಿ ಬರೆಯಬೇಕು ಎಂದು ಇಲ್ಲ.

ಆವರ ಕಾರ್ಯವೈಖರಿಯಲ್ಲಿ ಯಾರ ಕಡೆಯಿಂದಲಾದರೂ ಬರೆಸುತ್ತಾರೆ. ಆ ರೀತಿ ಬರೆಸಿದ್ದರೂ ಅದನ್ನೇ ಹೇಳುತ್ತಿರಿ. ಇದೊಂದು ಕ್ಷುಲಕ ಕಾರಣ. ಈ ಸದನದಲ್ಲಿ ಯಾವ ವಿಷಯವನ್ನು ಯಾವ ರೀತಿ ಪ್ರಸ್ತಾಪ ಮಾಡಬೇಕೆಂದು ಹೇಳದಿದ್ದರೆ ನಾವು ಯಾವ ರೀತಿ ಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಪತ್ರವನ್ನು ಬರೆಸಿದ್ದಾರೆ. ಇದು ವಿರೋಧ ಪಕ್ಷದ ಲಕ್ಷಣವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಭಾರೀ ನೀರಾವರಿ ಸಚಿವರಲ್ಲಿ ಕೇಳುವುದಿಷ್ಟೆ. ಒಂದು ಕೆಲಸವನ್ನು ಮಾಡೋಣ ಸ್ವಾಮಿ. 14ನೇ ತಾರೀಖಿನಿಂದ ಮಾನ್ಯ ಜಿ. ಮಾದೇಗೌಡರ ನೇತೃತ್ವದಲ್ಲಿ ನಾವೆಲ್ಲಾ ನಮ್ಮ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ ಹೋರಾಟವನ್ನು ಪ್ರಾರಂಭ ಮಾಡುತ್ತಿದ್ದೇವೆ. ನಿಮ್ಮ ಹತ್ತಿರ 18ನೇ ತಾರೀಖಿಗೆ ಬರುತ್ತಿದ್ದೇವೆ. ನಾಡಿದ್ದು ಅಧಿವೇಶನ ಮುಗಿಯುತ್ತದೆ. 18ನೇ ತಾರೀಖಿಗೆ ಇಲ್ಲಿಗೆ ಬರುತ್ತೇವೆ. ತಾವು ದಯ ಮಾಡಿ ಮಾದೇಗೌಡರ ಜೊತೆಯಲ್ಲಿ ಮತ್ತು ಅಲ್ಲಿ ಶಾಸಕರು ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಬರುವುದಕ್ಕೆ ಸ್ವಲ್ಪ ಮುಜುಗರ ಇರುತ್ತದೆ. ಏಕೆಂದರೆ ಆ ಸ್ಥಾನದಲ್ಲಿ ಯಾರಾದರೂ ಏನೇನೋ ಮಾತನಾಡುತ್ತಾರೆ. ನಮಗೂ ಸಹಿತ ನಮ್ಮ ಮುಖ್ಯಮಂತ್ರಿಗಳಿಗೆ ಹಾಗೆಲ್ಲಾ ಬಯ್ದರೆ ಮನಸ್ಸಿಗೆ ನೋವಾಗುತ್ತದೆ. ತಾವು ದಯವಿಟ್ಟು ಮಂಡ್ಯಾಕ್ಕೆ ಭೇಟಿ ಕೊಟ್ಟು ಅಲ್ಲಿ ಎಷ್ಟು ನೀರು ಬೇಕು ಎನ್ನುವುದನ್ನು ಒಂದು ಕಡೆ ಲೆಕ್ಕ ಹಾಕಿ ಕೆಆರ್‌ಎಸ್ ಅಣೆಕಟ್ಟಿನಲ್ಲಿ ಎಷ್ಟು ನೀರು ಇದೆ, ಏನು ಮಾಡಬೇಕು, ಆ ಗ್ಯಾಪ್‌ಗೆ ಎನ್ನುವುದರ ಬಗ್ಗೆ ತಾವು ಭೇಟಿ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಹೆಚ್.ಕೆ. ಪಾಟೀಲ್ (ಭಾರೀ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೇ, ಈಗ ಕೆಆರ್‌ಎಸ್‌ನಲ್ಲಿರತಕ್ಕ ನೀರನ್ನು ಕುಡಿಯುವ ನೀರಿಗೆ ನಾವು ಉಳಿಸಿಕೊಂಡು ಕುಡಿಯುವ ನೀರನ್ನು ಒದಗಿಸಿಕೊಡುವುದಕ್ಕೆ ಸಾಕಾಗುತ್ತದೆ. ಈಗ ನೀವು ಕಬ್ಬಿಗೆ ನೀರು ಕೊಡಿ ಎಂದರೆ ಸಾಧ್ಯವಾಗುವುದಿಲ್ಲ. ಸನ್ಮಾನ್ಯ ಆತ್ಮಾನಂದರವರು ಐಸಿಸಿ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತಿರುವುದು ಏನೆಂದರೆ ನಮಗೆ ಈಗ ಹೊಸದಾಗಿ ಯಾರೂ ಕಬ್ಬು ಹಾಕಿಲ್ಲ. ಕಬ್ಬು ಏನು ನಾವು ಕತ್ತರಿಸಿದ್ದೇವೆ, ಅದರಲ್ಲಿ ಕೂಳೆ ಕಬ್ಬು ಎಂದು ಬರುತ್ತದೆ. ಕೂಳೆ ಕಬ್ಬು ಇರತಕ್ಕಂಥದ್ದು. ನಿಮಗೂ ಕೂಳೆ ಬೆಳೆ ಎಂದರೆ ಏನು ಎಂದು ಗೊತ್ತಿದೆ. ಅದು ಎರಡನೇ ಬೆಳೆ. ಆ ಬೆಳೆಯನ್ನು ನಾನು ಈಗ ರಕ್ಷಣೆ ಮಾಡಿಕೊಳ್ಳಬೇಕು. ಬಿಡಿ, ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಿರತಕ್ಕಂಥಾದ್ದು, ಅದಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ. ಗಾಣಗಳು ಮುಚ್ಚಿರತಕ್ಕಂಥದ್ದು, ಅದಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ. ಕುಡಿಯುವ ನೀರಿಗೂ ಅಲೆದಾಟ ಇದೆ. ಅದು ಬೇರೆ ವಿಚಾರವಾಯಿತು. ನೀವು ಭೇಟಿ ಕೊಡುವುದಕ್ಕೆ ತೊಂದರೆಯೇನು? ದಯವಿಟ್ಟು ಭೇಟಿ ಕೊಡುವುದಕ್ಕೆ ಸಾಧ್ಯವೇ? ಮಾನ್ಯ ಜಿ. ಮಾದೇಗೌಡರ ನೇತೃತ್ವದಲ್ಲಿ ಇರತಕ್ಕಂಥ ಸಮಿತಿಗೆ 14ನೇ ತಾರೀಖು ಅವರು ಹೋರಾಟ ಮಾಡುವುದಕ್ಕೆ ಮುಂಚೆ ನೀವು ಭೇಟಿ ಕೊಟ್ಟು ಅಲ್ಲಿ ಕೆಆರ್‌ಎಸ್‌ನಲ್ಲಿ ನೀರು ಇರತಕ್ಕಂಥದ್ದು, ಅದು ಬೇರೆ ಬೇರೆ ಇದೆಯಲ್ಲಾ, ಎಂಟು ಹೆಸರುಗಳನ್ನು ತಂದರಲ್ಲಾ, ಅದನ್ನು ಓದಬೇಕಾಗಿತ್ತು. ನೀವೇನೂ ಹೆದರಿಕೊಳ್ಳಬೇಡಿ. ಆಡಳಿತ ಪಕ್ಷದಲ್ಲಿದ್ದರು ಏನು ಹೆದರೆಕೊಳ್ಳತಕ್ಕ ಅವಶ್ಯಕತೆ ಏನಿಲ್ಲ. ನೀವು ಹೆದರುವಂಥವರೂ ಅಲ್ಲ. ಅದರಿಂದ ತಾವು ಭೇಟಿ ಕೊಟ್ಟುಬಿಡಿ ಸಾಕು. ಆಮೇಲೆ

ಉಳಿದದ್ದು ನೋಡೋಣ. ಪಾದಯಾತ್ರೆ ಬೇರೆ ಮಾಡಿದ್ದಾರೆ. ನೀವು ಅವತ್ತು ಬಂದಿರಲಿಲ್ಲವೆಂದು ಕಾಣುತ್ತದೆ. ನೀವೂ ಬಂದಿದ್ದರಾ? ಅದೇ ಇಲ್ಲಿಂದ ಶುರುವಾಗಿತ್ತಲ್ಲ ಮುಖ್ಯಮಂತ್ರಿಗಳ ಪಾದಯಾತ್ರೆ, ಅಷ್ಟು ಮಾಡುವುದಕ್ಕೆ ತೊಂದರೆಯೇನು ಸ್ವಾಮಿ ಇವರಿಗೆ? ದಯವಿಟ್ಟು ಅದಕ್ಕೆ ಉತ್ತರ ಕೊಡಿ ಸ್ವಾಮಿ.

ಶ್ರೀ ಹೆಚ್.ಕೆ. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಹಿರಿಯ ನಾಯಕರು, ಶಾಸನಸಭಾ ಸದಸ್ಯರು ಒಂದು ಸಲಹೆಯನ್ನು ಮಾಡಿದ್ದಾರೆ, ನಾವು ಯಾವುದೇ ಸಲಹೆ ಕೊಟ್ಟರೂ ಗಮನಿಸುತ್ತಿರುತ್ತೇವೆ. ಈ ಸಲಹೆಯನ್ನು ಕೊಟ್ಟಿದ್ದೀರಿ. ಅದನ್ನು ಗಂಭೀರವಾಗಿ ಗಮನಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಇದನ್ನೇ ನಾನು ಹೇಳುವುದಕ್ಕೆ ಹೊರಟಿದ್ದುದ್ದು. ನೋಡಿ ಎಲ್ಲಾದರೂ ಉಂಟಾ? ಈ ಸ್ಥಿತಿ ಬರಬಾರದು ಸ್ವಾಮಿ.

ಅಧ್ಯಕ್ಷರು :- ರಿಜೆಕ್ಟ್ ಮಾಡಲಿಲ್ಲವಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ನೀವ್ಯಾಕೆ ಅವರ ಡಿಫೆನ್ಸ್‌ಗೆ ಹೋಗುತ್ತೀರಿ? ಒಳ್ಳೆಯ ಕತೆಯಾಯಿತು. ಮಾನ್ಯ ಮುಖ್ಯಮಂತ್ರಿಗಳು ಅವರ ಸ್ವಕ್ಷೇತ್ರಕ್ಕೆ ಹೋಗುವುದಕ್ಕಾಗುವುದಿಲ್ಲ. ಅದೂ ಪರಿಸ್ಥಿತಿ.

ಶ್ರೀ ಹೆಚ್.ಕೆ. ಪಾಟೀಲ್ :- ಹೋಗಿಲ್ಲವೇ? ಮಂಡ್ಯದಲ್ಲಿ ಅತ್ಯಂತ ಭರ್ಜರಿಯಾಗಿ ದೊಡ್ಡ ಸಾರ್ವಜನಿಕ ಸಭೆಯನ್ನು ಮಾಡಿದ್ದೇವೆಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಅದಕ್ಕೆ ಜನರು ಎಲ್ಲಿಂದ ಬಂದಿದ್ದರು ಗೊತ್ತೇನು? ಚಡಚಣದಿಂದ ಬಂದಿದ್ದರು. ನಿಪ್ಪಾಣಿಯಿಂದ ಬಂದಿದ್ದರು.

ಶ್ರೀ ಹೆಚ್.ಕೆ. ಪಾಟೀಲ್ :- ಚಡಚಣದಿಂದ ಜನರು ಬಂದಿದ್ದರು, ಕನಕಪುರದಿಂದ ಜನ ನೋಡುವುದಕ್ಕೆ ಬಂದಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಹಾ! ಅದನ್ನೇ ನಾನು ಹೇಳುತ್ತಿರುವುದು. ಕರೆಸಿಕೊಂಡಿದ್ದರು.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ನಮ್ಮಲ್ಲೂ ಸಹಿತ ಈ ವರ್ಷ ಮಳೆ ಬರದೆ ನಮ್ಮಲ್ಲೂ ಭದ್ರಾ ಡ್ಯಾಮ್‌ನಲ್ಲಿ ನೀರು ಇಲ್ಲ. ನಮ್ಮಲ್ಲೂ ನಿಂತಿರುವ ಸ್ಯಾ ್ಯಂಡಿಂಗ್ ಕ್ರಾಪ್ ಒಣಗುತ್ತದೆ. ಕೆಳಗಡೆಯವರು ಹರಿಹರ ಇತ್ಯಾದಿ, ಆ ಕಡೆಯವರೆಲ್ಲಾ ಕುಡಿಯುವುದಕ್ಕೆ ನೀರು ಬೇಕು ಎಂದು ಕೇಳುತ್ತಿದ್ದಾರೆ, ನಮ್ಮ ವಿರೋಧ ಪಕ್ಷದ ನಾಯಕರು ಅದಕ್ಕೆ ಪರಿಹಾರ ಕೇಳುವುದಕ್ಕೆ ಮಾನ್ಯ ಆತ್ಮಾನಂದರವರಿಗೆ ಸಪೋರ್ಟ್ ಮಾಡಿ ಮಾತನಾಡಿದರು. ಪಾಪ ಅವರ ಕಡೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂರು-ನಾಲ್ಕು ವರ್ಷದಿಂದ ಬೆಳೆಯಾಗಿಲ್ಲ. ಬೆಳೆಯಾಗದೆ ಅನೇಕ ಕಡೆ ಬರಗಾಲ ಬಂದಿದೆ. ಇವತ್ತಿನವರೆಗೂ ಆ ಬರಗಾಲ ಬಂದವರಿಗೆ ಪರಿಹಾರವನ್ನು ಕೊಡಿ ಎಂದು ಕೇಳುತ್ತಿಲ್ಲ. ಏನೋ ಒಂದು ಮಳೆಯಾಗಲಿಲ್ಲ, ಕಾವೇರಿ ನದಿಯಲ್ಲಿ ನೀರಿಲ್ಲ, ಒಂದು ಮಳೆಯಾಗದೇ ಇದ್ದುದ್ದಕ್ಕೆ ಇಷ್ಟೊಂದು ದೊಡ್ಡದು ಮಾಡಿ ಅದು ಕೊಡಿ, ಪರಿಹಾರವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಅವರಿಗೆ ಐದಾರು ವರ್ಷದಿಂದ ಮಳೆ ಇಲ್ಲ ನಮಗೂ ಕೊಡಿ ಎಂದು ಕೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಕರಿಯಣ್ಣನವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುವುದಕ್ಕೆ ನಿಂತಿದ್ದಾರೋ ಏನೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕರಿಯಣ್ಣ :- ನಮ್ಮಲ್ಲೂ ಸ್ಟಾಂಡಿಂಗ್ ಕ್ರಾಪ್‌ಗೆ ನೀರಿಲ್ಲ. ಬಿಡಿ ಎಂದು ಹೋರಾಟ ಮಾಡೋಣವೇ?

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೇ, ಇಲ್ಲ ಪ್ರಮುಖವಾಗಿ ಒಂದೂವರೆ ತಿಂಗಳ ಹಿಂದೆ ಮೈಸೂರಿನಲ್ಲಿ ಕಾಡಾದಲ್ಲಿ ಸಭೆಯಾದಂಥ ಸಂದರ್ಭದಲ್ಲಿ ಜಿಲ್ಲಾ ಮಂತ್ರಿಗಳು ಇಲ್ಲೇ ಇದ್ದಾರೆ, ಅವತ್ತಿನ ಪರಿಸ್ಥಿತಿಯ ಒಳಗಡೆ ಇರುವಂಥ ಕ್ರಾಪ್‌ಗೆ ಕೊಡಲಿಕ್ಕಾಗುವುದಿಲ್ಲವೆನ್ನುವಂಥ ವಿಚಾರವನ್ನು ಮಂಡ್ಯಾದಲ್ಲಿದ್ದಂಥ ರೈತರುಗಳನ್ನೂ ಕೂಡ ಕರೆದು ಅಲ್ಲಿ 69 ಅಡಿಗಿಂತ ಕೆಳಗಡೆ ಬಂದರೆ ಮೈಸೂರು ನಗರಕ್ಕೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವಂಥ ಪರಿಸ್ಥಿತಿಯಾಯಿತು. 15 ದಿವಸದಿಂದ ಇವತ್ತೂ ಕೂಡ ನದಿಯಿಂದ ಮೇಲುಗಡೆಗೆ ನೀರನ್ನು ತೆಗೆಯುವುದಕ್ಕಾಗದೆ 18 ಎಂಜಿಡಿ ನೀರು ತೆಗೆಯಬೇಕಾದಂಥ ಪಂಪೂ ತೆಗೆಯಲಿಕ್ಕಾಗಿಲ್ಲ. ಈಗ ಏನಾದರೂ ಕೂಡ ಮುಕ್ಕಾಲು, ಒಂದು ಅಡಿ ನೀರೇನಾದರೂ ಕಡಿಮೆಯಾದರೆ ಇವತ್ತು ಆ ನಾಲೆಯಿಂದ ಏನು ನೀರನ್ನು ಡೈರೆಕ್ಟ್ ಆಗಿ ಪಂಪ್ ಮಾಡಿತ್ತಿದ್ದೇವೆ, ಅದೂ ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವ ಪರಿಸ್ಥಿತಿ ಇನ್ನು ಎರಡು ತಿಂಗಳು ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಏನು ಕ್ರಮತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಾವು ಹೇಳಬೇಕು.

ಶ್ರೀ ಎಂ.ಎಸ್. ಆತ್ಮಾನಂದ :- ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ನಾಲಾ ಬಯಲಿನ ಬೆಳೆಗಳ ಪರಿಸ್ಥಿತಿ ನಮ್ಮ ಜೀವನ್ಮರಣದ ಪ್ರಶ್ನೆ. ನಮಗೂ ಗೊತ್ತಿರತಕ್ಕಂಥದ್ದು ನಮ್ಮ ಬೆಳೆಗಳಿಗೆ ನೀರನ್ನು ಕೊಡುವುದಕ್ಕಾಗುವುದಿಲ್ಲ, ನೀರು ಸಂಗ್ರಹವಿಲ್ಲವೆನ್ನುವುದು ಸರ್ವವಿದಿತವಾದದ್ದು. ಇಲ್ಲಿರುವ ಹಾಗೆ ಬರದಿಂದ ಅಲ್ಲಿ ನೀರು ಖಾಲಿಯಾಗಿಲ್ಲ. ಅದು ಏತಕ್ಕೆ ಆಯಿತು ಎನ್ನತಕ್ಕಂಥದ್ದು ಜನತೆಗೆ ಗೊತ್ತಿರತಕ್ಕಂಥದ್ದು. ಅದರ ಬಗ್ಗೆ ನಾನು ಲಂಬಿಸಿ ಹೋಗುವುದಿಲ್ಲ. ಆದರೆ ನಾವು ಬೆಳೆದಿರುವ ಬೆಳೆಗಳು ಒಣಗಿ ಹೋಗುತ್ತಿವೆ. ನಮಗೆ ಮುಂದಿನ ದಿನಗಳಲ್ಲಿ ಜೂನ್ ತಿಂಗಳು ಕಳೆದ ನಂತರ ನಮಗೆ ಇರತಕ್ಕ ದೈನಂದಿನ ಜೀವನಕ್ಕೆ ಆಧಾರವಾಗಿರತಕ್ಕಂಥದ್ದು ಆ ಬೆಳೆಗಳು. ಆ ಬೆಳೆಗಳು ಹೋಗುತ್ತಿರುವುದರಿಂದ ಸರ್ಕಾರ ನಮ್ಮ ಬೆಳೆಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ನಾವು ಖರ್ಚು ಮಾಡಿರುವ ಕೃಷಿ ಸಾಲದ ಮೇಲಿನ ಬಡ್ಡಿಯನ್ನು ಮತ್ತು ಕೂಡ ಪರಿಹಾರವನ್ನು ಕೊಡತಕ್ಕ ಒಂದು ಕಾರ್ಯದಲ್ಲಿ ನಮ್ಮ ಜನತೆಯ ಆಶಯದಂತೆ ಈಗಾಗಲೇ ಜಿಲ್ಲಾ ಸಮಿತಿಯಿಂದ ಸರ್ಕಾರಕ್ಕೆ ತಿಳಿಸಿ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ಹೇಳಬೇಕು. ಮತ್ತು ವಸ್ತುಸ್ಥಿತಿಯನ್ನು ಅರಿಯಲು ನಮ್ಮ ನೀರಾವರಿ ಸಚಿವರೇ ಬಂದು ನಮ್ಮ ಪ್ರದೇಶದ ಬೆಳೆಗಳನ್ನು ಅವರೇ ಪರೀಕ್ಷೆ ಮಾಡಲಿ ಅಧ್ಯಕ್ಷರೇ. ತದನಂತರ ಅವರು ತೀರ್ಮಾನವನ್ನು ಮಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೇ, ಕಳೆದವರ್ಷ ಬಜೆಟ್‌ನಲ್ಲಿ ನಾನೊಂದು ಉಪಾಯವನ್ನು ನಿಮಗೆ ಹೇಳಿಕೊಡುತ್ತೇನೆ. ಬಹಳ ಸುಲಭವಾದ ಉಪಾಯ. 2002-03 ನಾಡಿದ್ದಕ್ಕೆ ಮುಗಿದುಹೋಯಿತಲ್ಲಾ ಸ್ವಾಮಿ. 2002-03ರಲ್ಲಿ ಮಂಡ್ಯಾ ಜಿಲ್ಲೆಯ ರಸ್ತೆಗಳ

ಅಭಿವೃದ್ಧಿಗೋಸ್ಕರ ಎಂದು ಹೇಳಿ ಬಜೆಟ್‌ನಲ್ಲಿ 300 ಕೋಟಿ ರೂಪಾಯಿ ಇತ್ತು. ಅದು ಖರ್ಚಾಗಿಲ್ಲ. ಆ 300 ಕೋಟಿ ರೂಪಾಯಿಗಳನ್ನು ಬೆಳೆ ಪರಿಹಾರ ಎಂದು ಕೊಟ್ಟುಬಿಡಿ. ಸಮಸ್ಯೆ ಬಗೆಹರಿಯಿತಲ್ಲಾ. ಅದನ್ನು ಕೊಡುವುದಕ್ಕೆ ನಿಮಗೆ ತೊಂದರೆಯೇನು?

ಶ್ರೀ ಹೆಚ್.ಕೆ. ಪಾಟೀಲ್ :- ಮಾನ್ಯ ಸಿಂಧ್ಯಾರವರು ಪಾರಾಗುವ ಉಪಾಯವನ್ನು ಹೇಳುತ್ತಾರೆಂದರೆ ಈ ಉಪಾಯವನ್ನು ಹೇಳುತ್ತೀರಲ್ಲಾ. ಮಾನ್ಯ ಆತ್ಮಾನಂದರವರು ಈಗಾಗಲೇ ಪ್ರಸ್ತಾಪಿಸಿದ ಹಾಗೆ ಅವರು ಕೆಲವು ಮನವಿಗಳನ್ನೂ ಸಹಿತ ಸರ್ಕಾರಕ್ಕೆ ಕೊಟ್ಟಿರತಕ್ಕಂಥದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಮನವಿಗಳನ್ನು ಪರಿಶೀಲನೆ ಮಾಡುತ್ತೇನೆ. ಮಾನ್ಯ ರಾಮದಾಸ್‌ರವರು ಮೈಸೂರು ನಗರಕ್ಕೆ ಕುಡಿಯುವ ನೀರಿಗಾಗಿ ಏನು ವ್ಯವಸ್ಥೆ ಮಾಡಿದ್ದೀರಿ, ಒಂದು ಅಡಿ ನೀರು ಕೆಳಗೆ ಹೋದರೆ ಬಹಳ ತೊಂದರೆ ಬರುತ್ತೆ ಎಂದು ಹೇಳಿ ಹೇಳಿದರು. ತಮಗೂ ಗೊತ್ತಿದೆ ರಾಮದಾಸ್‌ರವರೇ. ನಮ್ಮ ರಿವರ್ ಮೇಲೆ ಹರಿಯತಕ್ಕ ನೀರಿನಲ್ಲೇ ನಾವು ನೀರನ್ನು ಎತ್ತಬಹುದಾಗಿರತಕ್ಕ ಪಂಪ್‌ಸೆಟ್‌ಗಳು ಇವೆ. ಅದರ ಬಗ್ಗೆ ಬಹುಶಃ ಜಿಲ್ಲಾ ಸಚಿವರು ಕ್ರಮಗಳನ್ನು ಕೈಗೊಂಡಿರಬೇಕು. ಆ ವಿವರ ನನ್ನ ಹತ್ತಿರ ಇಲ್ಲ. ಆದರೆ ಮೈಸೂರು ನಗರಕ್ಕೆ ಕುಡಿಯುವ ನೀರಿಗಾಗಿ ಯಾವ ರೀತಿಯಾಗಿರತಕ್ಕ ಅನುಕೂಲತೆ ಮಾಡುವುದಕ್ಕಾಗಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆನ್ನುವುದನ್ನು ನಿಮಗೆ ನಾನು ಪತ್ರದ ಮುಖಾಂತರ ಕಳುಹಿಸುತ್ತೇನೆ.

## ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ನೀರಿನ ತೊಂದರೆಯಿಂದ ಭತ್ತದ ಬೆಳೆ ನಾಶವಾಗಿರುವುದು

208 (2215) ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀರಂಗಪಟ್ಟಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಎಕರೆ ಭತ್ತ ಬೆಳೆಯಲಾಗಿದೆ;

ಆ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಭತ್ತದ ಬೆಳೆ ಎಷ್ಟು ಎಕರೆ ಇದೆ;

ಇ) ನೀರಿನ ತೊಂದರೆಯಿಂದಾಗಿ ಭತ್ತದ ಬೆಳೆ ನಾಶವಾಗಿದೆಯೇ; ನಾಶವಾಗಿದ್ದಲ್ಲಿ ಪರಿಹಾರದ ಬಗ್ಗೆ ಕೈಗೊಂಡಿರುವ ಕ್ರಮ ಏನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಭತ್ತದ ಬೆಳೆಯನ್ನು ಪ್ರತಿ ವರ್ಷ ಸುಮಾರು 35 ಲಕ್ಷ ಎಕರೆ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. 2002-03ನೇ ಸಾಲಿನಲ್ಲಿ ಇದುವರೆವಿಗೂ 26.79 ಲಕ್ಷ ಎಕರೆ ವಿಸ್ತೀರ್ಣದಲ್ಲಿ ಭತ್ತದ ಬೆಳೆಯನ್ನು ಬೆಳೆಯಲಾಗಿದೆ.

ಆ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 2002-03ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬತ್ತದ ಬೆಳೆಯನ್ನು 15,808 ಎಕರೆ ಗುರಿಗೆ ಎದುರಾಗಿ 13,857 ಎಕರೆ ವಿಸ್ತೀರ್ಣದಲ್ಲಿ ಬೆಳೆಯಲಾಗಿತ್ತು. ಬೇಸಿಗೆ ಹಂಗಾಮಿನಲ್ಲಿ 7,904 ಎಕರೆ ಗುರಿಗೆ ಎದುರಾಗಿ 1,111.5 ಎಕರೆ ವಿಸ್ತೀರ್ಣದಲ್ಲಿ ಬೆಳೆಯಲಾಗಿದ್ದು, ಸದರಿ ಬೆಳೆಯು ಬೆಳವಣಿಗೆ ಹಂತದಲ್ಲಿದೆ. ಹಿಂಗಾರು ಹಂಗಾಮಿನಲ್ಲಿ ಬತ್ತದ ಬೆಳೆಯನ್ನು ಬೆಳೆದಿರುವುದಿಲ್ಲ.

ಇ) ನೀರಿನ ತೊಂದರೆಯಿಂದಾಗಿ ಬಿತ್ತನೆ ಮಾಡಿದ ಭತ್ತದ ಬೆಳೆ ನಾಶವಾಗಿರುವ ಬಗ್ಗೆ ಈವರೆವಿಗೆ ವರದಿಯಾಗಿರುವುದಿಲ್ಲ. ಜಲಸಂಪನ್ಮೂಲ ಇಲಾಖೆಯು ನೀರಾವರಿ ಸಲಹಾ